**ಸೂಚನೆ:–**

1) ಈ ಪ್ರವೇಶ ಪತ್ರವು ತಾತ್ಕಾಲಿಕ ಪ್ರವೇಶ ಪತ್ರವಾಗಿದ್ದು, ಅಭ್ಯರ್ಥಿಗಳು ಹಾಜರುಪಡಿಸುವ ಮೂಲ ದಾಖಲೆಗಳನ್ನು ಪರಿಶೀಲಿಸಿದ ನಂತರ, ಮೂಲ ದಾಖಲೆಗಳಲ್ಲಿರುವ ಮಾಹಿತಿಗೂ ಮತ್ತು ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗೂ ತಾಳೆ ನೋಡಿ, ಎಲ್ಲಾ ಮಾಹಿತಿಗಳು ಸರಿಯಾಗಿವೆ ಎಂದು ಕಂಡುಬಂದ ನಂತರ ಅಂತಹ ಅಭ್ಯರ್ಥಿಗಳಿಗೆ ಮಾತ್ರ ಪೂರ್ವಭಾವಿ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದು.

2) ಆಯ್ಕೆ ಪ್ರಕ್ರಿಯೆಯ ಪೂರ್ಣ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಪ್ರಕಟಪಡಿಸಲಾಗುವುದು.

## ಬಹು ಮುಖ್ಯವಾದ ಸೂಚನೆಗಳು / IMPORTANT INSTRUCTIONS

**ಈ ಕೆಳಕಂಡ ಮೂಲ ದಾಖಲಾತಿಗಳೊಂದಿಗೆ ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ಸೂಚಿಸಲಾಗಿದೆ:–**

**(ಈ ಕೆಳಕಂಡ ಪ್ರಮಾಣ ಪತ್ರಗಳ ಮೂಲ ಪ್ರತಿ ಹಾಗೂ ಒಂದು ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಮೂಲ ದಾಖಲೆಗಳ ಪರಿಶೀಲನೆ ನಂತರ ಮೂಲ ಪ್ರತಿಗಳನ್ನು ಹಿಂದಿರುಗಿಸಲಾಗುವುದು. ಅಧಿಸೂಚನೆಯಲ್ಲಿ ನೀಡಿರುವ ಎಲ್ಲಾ ಮಾಹಿತಿಗಳನ್ನು ಅಭ್ಯರ್ಥಿಗಳು ಓದಿ ಗಮನದಲ್ಲಿಟ್ಟುಕೊಳ್ಳುವುದು)**

**ಒಂದು ವೇಳೆ, ಮೂಲ ದಾಖಲೆಗಳನ್ನು ವಿದ್ಯಾ ಸಂಸ್ಥೆಗಳಲ್ಲಿ ಒತ್ತೆ ಇಟ್ಟಿದ್ದಲ್ಲಿ ಹಾಗೂ ಆ ಮೂಲ ದಾಖಲೆಗಳನ್ನು ಹಾಜರುಪಡಿಸಲು ಅಭ್ಯರ್ಥಿಗಳಿಗೆ ಅಸಾಧ್ಯವಾದಲ್ಲಿ ಅಂತಹ ಮೂಲ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ತೆಗೆದು ಅವುಗಳನ್ನು ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿ (Attested), ದೃಢೀಕರಿಸಿದ ಮೂಲ ದಾಖಲೆಗಳ ಪ್ರತಿಗಳನ್ನು ಪರಿಶೀಲನೆಯ ವೇಳೆ ಹಾಜರುಪಡಿಸಬಹುದು ಮತ್ತು ಹಾಗೆ ಮಾಡಿದ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಮೂಲ ದಾಖಲೆಗಳನ್ನು ಹಾಜರುಪಡಿಸಿದ ನಂತರ ಇವರ ಆಯ್ಕೆಯ ಬಗ್ಗೆ ಪರಿಗಣಿಸುವ ಷರತ್ತಿಗೊಳಪಟ್ಟಿರುತ್ತದೆ.**

1) ಜನ್ಮ ದಿನಾಂಕವನ್ನು ದೃಢಪಡಿಸುವ ಅಂಕ ಪಟ್ಟಿ ಅಥವಾ ಶಾಲಾ ವರ್ಗಾವಣೆ ಪತ್ರ (ಟಿ.ಸಿ.)
2) ವಿದ್ಯಾರ್ಹತೆ ದೃಢೀಕರಣ ಅಂಕ ಪಟ್ಟಿ / ಪ್ರಮಾಣ ಪತ್ರ
3) 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೆ, ಆ ಬಗ್ಗೆ ದೃಢೀಕರಣ ಪತ್ರ.
4) ವಿವಿಧ ಪ್ರವರ್ಗಗಳ ಮೀಸಲಾತಿ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ. (ಎಸ್.ಸಿ., ಎಸ್.ಟಿ., ಪ್ರವರ್ಗ–I, IIಎ, IIಬಿ, IIIಎ, IIIಬಿ)
5) ಮಾಜಿ ಸೈನಿಕರಾಗಿದ್ದಲ್ಲಿ ಸಂಬಂಧಪಟ್ಟ ಘಟಕದಿಂದ ಡಿಸ್‌ಚಾರ್ಜ್ ಹೊಂದಿದ ಬಗ್ಗೆ ಮೂಲ ಪ್ರಮಾಣ ಪತ್ರ ಮತ್ತು ಪೆನ್‌ಷನ್ ಪಡೆಯುತ್ತಿರುವ ಬಗ್ಗೆ ದಾಖಲೆ ಪತ್ರ ಹಾಗೂ ಮಾಜಿ ಸೈನಿಕ ಮೀಸಲಾತಿಗೆ ನಿಯಮಾನುಸಾರ ಅರ್ಹರೇ ಎಂಬ ಬಗ್ಗೆ ಹತ್ತಿರದ ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ ಇಲಾಖೆಯಿಂದ ಪಡೆದ ಪ್ರಮಾಣ ಪತ್ರ.
6) ಗ್ರಾಮೀಣ ಅಭ್ಯರ್ಥಿ – ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
7) ಯೋಜನಾ ನಿರಾಶ್ರಿತ ಅಭ್ಯರ್ಥಿ – ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರ.
8) ಅರ್ಜಿಯಲ್ಲಿ ನಮೂದಿಸಿರುವ ಮೊತ್ತದ ಡಿ.ಡಿ. ಯನ್ನು ಮೂಲ ದಾಖಲೆಗಳ ಪರಿಶೀಲನೆ ವೇಳೆ ಇಲಾಖಾ ವಶ ನೀಡತಕ್ಕದ್ದು. ಈ ಡಿ.ಡಿ.ಯು ದಿನಾಂಕ 07–11–2011ರ ಅವಧಿಯ ಒಳಗೆ ಪಡೆದಿರುವ ಡಿ.ಡಿ.ಯಾಗಿರತಕ್ಕದ್ದು.

---

1) ಲಿಖಿತ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾಗುವ 30 ನಿಮಿಷ ಮುಂಚಿತವಾಗಿ ಪರೀಕ್ಷಾ ಕೊಠಡಿಗೆ ಬಂದು ಗುರುತಿಸಲಾದ ತಮ್ಮ ಆಸನದಲ್ಲಿ ಕುಳಿತುಕೊಳ್ಳತಕ್ಕದ್ದು. ಪರೀಕ್ಷೆ ಆರಂಭವಾದ ನಂತರ ಪರೀಕ್ಷಾ ಕೊಠಡಿ ಪ್ರವೇಶಿಸಲು ಯಾವುದೇ ಕಾರಣಕ್ಕೂ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುವುದಿಲ್ಲ.
2) ಪರೀಕ್ಷೆ ಕೊಠಡಿಗೆ ಮೊಬೈಲ್ ಫೋನ್, ಪೇಜರ್, ಕ್ಯಾಲ್ಕುಲೇಟರ್, ಗಣಕಯಂತ್ರ, ಪುಸ್ತಕ, ನೋಟ್ ಪುಸ್ತಕ, ಜ್ಯಾಮಿತಿ ಯಂತ್ರ ಪೆಟ್ಟಿಗೆ ಇತ್ಯಾದಿಗಳನ್ನು ತರಲು ನಿಷೇಧಿಸಿದೆ. ಯಾರಾದರು ಅಭ್ಯರ್ಥಿಗಳು ಇವುಗಳನ್ನು ಮುಚ್ಚುಮರೆಯಿಂದ ಪರೀಕ್ಷಾ ಕೊಠಡಿ ಒಳಗೆ ತಂದರೆ ಅಂತಹವರನ್ನು ಪರೀಕ್ಷಾ ಕೊಠಡಿಯಿಂದ ಹೊರಗೆ ಕಳುಹಿಸಲಾಗುವುದು ಹಾಗೂ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.
3) ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಪೆನ್ ಹಾಗೂ ಪರೀಕ್ಷೆ ಪ್ರವೇಶ ಪತ್ರವನ್ನು ಮಾತ್ರ ತರಬೇಕು. ಪ್ರವೇಶ ಪತ್ರ ತರದಿರುವ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.
4) ಅಭ್ಯರ್ಥಿಗಳು ಉತ್ತರ ಬರೆಯಲು ಪೆನ್ ಮಾತ್ರ ಬಳಸಬೇಕು, ಪೆನ್ಸಿಲ್ ಬಳಸಬಾರದು ಹಾಗೂ ಬಿಳಿ ಇಂಕ್ (ವೈಟ್ನರ್) ಉಪಯೋಗಿಸಕೂಡದು.
5) ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುವ ಅಭ್ಯರ್ಥಿಗಳನ್ನು ಮುಂದೆ ನಡೆಯಲಿರುವ ಆಯ್ಕೆಗೆ ಅನರ್ಹರೆಂದು ಘೋಷಿಸಲಾಗುವುದು ಹಾಗೂ ಅರಣ್ಯ ಇಲಾಖೆಯು ನಡೆಸುವ ನೇರ ನೇಮಕಾತಿ ಪರೀಕ್ಷೆಗಳಿಂದ ಮೂರು (3) ವರ್ಷಗಳವರೆಗೆ ಡಿಬಾರ್ ಮಾಡಲಾಗುವುದು.

**ವಿಶೇಷ ಸೂಚನೆ:–**

1) ಸದರಿ ಪರೀಕ್ಷೆಗಳು ಒಂದು ದಿನಕ್ಕಿಂತ ಜಾಸ್ತಿ ದಿನ ನಡೆಯುವ ಸಾಧ್ಯತೆ ಇರುವುದರಿಂದ ತಂಗಲು ಪೂರ್ವ ಸಿದ್ದತೆ ಮಾಡಿಕೊಂಡು ಬರತಕ್ಕದ್ದು.
2) ಸದರಿ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ತಂಗಲು ಹಾಗೂ ಊಟದ ಬಗ್ಗೆ ತಾವೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳಬೇಕು.
3) ಅಭ್ಯರ್ಥಿಗಳಿಗೆ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.

ಸಹಿ/–

**ಮುಖ್ಯ ಪರೀಕ್ಷಕರು.**